# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ಗುಡದಯ್ಯ ರಾಮಪ್ಪ ಕೊಪ್ಪದ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ 30-12-2019 ರಂದು ಕರೆಯಲಾಗಿದ್ದ ಸಭೆಯನ್ನು ಮುಂದೂಡಿ ಸದರಿ ಮುಂದೂಡಿದ ಸಭೆಯನ್ನು **ದಿನಾಂಕ: 04-01-2020 ರಂದು ಶನಿವಾರ 11-30 ಗಂಟೆಗೆ** ಜರುಗಿಸಿದ್ದು, ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಲಾಯಿತು. ಸದರಿ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

**ಸಭೆಗೆ ಹಾಜರಿದ್ದ ಸದಸ್ಯರು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಅಧ್ಯಕ್ಷರು |
| 2 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ಉಪಾಧ್ಯಕ್ಷರು |
| 3 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ಸದಸ್ಯರು |
| 4 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 5 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 6 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 7 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ,, |
| 8 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ,, |
| 9 | ಶ್ರೀ ನೀಲಪ್ಪ ಈರಪ್ಪ ಹತ್ತಿ | ,, |
| 10 | ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 11 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 12 | ಶ್ರೀ ಓಂಪ್ರಕಾಶ ಫುಕರಾಜ ಜೈನ್ | ,, |
| 13 | ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ | ,, |
| 14 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |

**ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

**ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |
| 2 | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾ.ಅ.ಯೋ. ಗದಗ | ಅಭಿಯಂತರರು |

ವಿಷಯ ನಂ-1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ-1) ದಿನಾಂಕ: 31-10-2019 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀ ಪುಲಕೇಶಿ ಗೂಳಪ್ಪ ಉಪನಾಳ
ಅನುಮೋದಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

ವಿಷಯ ನಂ–2) 2019–20 ನೇ ಸಾಲಿನ **ಅಕ್ಟೋಬರ್ ಮತ್ತು ನವ್ಹಂಬರ್** ತಿಂಗಳ ಸಮಿತಿಯ ಆದಾಯ–ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ–2) 2019–20 ನೇ ಸಾಲಿನ **ಅಕ್ಟೋಬರ್ ಮತ್ತು ನವ್ಹಂಬರ್** ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2019 ನೇ ಸಾಲಿನ ಅಕ್ಟೋಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ ಸಂ | ಆದಾಯ | ಮೊತ್ತ | ಕ್ರ ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 1.50%<br>ಬ) ಜಾನುವಾರು ಮಾ.ಶುಲ್ಕ | 636568–00<br>1114–00 | 1 | ಭದ್ರತಾ ಸಿಬ್ಬಂದಿ ವೆಚ್ಚ (2019 ಸಪ್ಟಂಬರ್ ತಿಂಗಳ) | 205154–00 |
| | ಒಟ್ಟು ರೂ. | **637682–00** | 2 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 10197–00 |
| | | | 3 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| 2 | ಶುದ್ಧ ನೀರಿನ ಘಟಕ | 6068–00 | 4 | ಸದಸ್ಯರ ಸಭಾ ಭತ್ಯೆ ಮತ್ತು ಸಿಟಿಂಗ್ ಫೀ | 16093–00 |
| 3 | ಲೀವ್ & ಲೈಸನ್ಸ್ ಶುಲ್ಕ | 8364–00 | 5 | ಸಭೆಯ ವೆಚ್ಚ | 2080–00 |
| 4 | ಫಾರ್ಮ ಫೀ | 2000–00 | 6 | ದೂರವಾಣಿ ವೆಚ್ಚ | 3271–00 |
| 5 | ದಂಡ | 2397–00 | 7 | ಸಾದಿಲ್ವಾರ ವೆಚ್ಚ | 4114–00 |
| 6 | ಬ್ಯಾಂಕಿನ ಬಡ್ಡಿ | 16889–00 | 8 | ವಿದ್ಯುತ್ ವೆಚ್ಚ | 20307–00 |
| | | | 9 | ಜೀಪ ಇಂಧನ ಮತ್ತು ದುರಸ್ತಿ | 7203–00 |
| | **ಒಟ್ಟು ರೂ.** | **673400–00** | | **ಒಟ್ಟು ರೂ.** | **272919–00** |
| | **ಕೊರತೆ** | **–** | | **ಉಳಿತಾಯ** | **400481–00** |
| | **ಅಂತೂ** | **673400–00** | | **ಅಂತೂ** | **673400–00** |

**2019 ನೇ ಸಾಲಿನ ನವ್ಹಂಬರ್** ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ

| ಕ್ರ ಸಂ | ಆದಾಯ | ಮೊತ್ತ | ಕ್ರ ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 1.50%<br>ಬ) ಜಾನುವಾರು ಮಾ.ಶುಲ್ಕ | 821045–00<br>1056–00 | 1 | ಭದ್ರತಾ ಸಿಬ್ಬಂದಿ ವೆಚ್ಚ (2019 ಅಕ್ಟೋಬರ್ ತಿಂಗಳ) | 205154–00 |
| | ಒಟ್ಟು ರೂ. | **822101–00** | 2 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 16226–00 |
| | | | 3 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| 2 | ಶುದ್ಧ ನೀರಿನ ಘಟಕ | 1974–00 | 4 | ಕಛೇರಿ ನಿರ್ವಹಣೆ | 1510–00 |
| 3 | ಲೀವ್ & ಲೈಸನ್ಸ್ ಶುಲ್ಕ | 7088–00 | 5 | ಸಭೆಯ ವೆಚ್ಚ | 2100–00 |
| 4 | ಲೈಸನ್ಸ್ ಶುಲ್ಕ | 2050–00 | 6 | ಅಂಚೆ ಮತ್ತು ತಂತಿ | 1000–00 |
| 5 | ಫಾರ್ಮ ಫೀ | 25–00 | 7 | ಜನಶ್ರೀ ವಿಮಾ ಯೋಜನೆ ಪ್ರೀಮಿಯಂ ವೆಚ್ಚ | 855–00 |
| 6 | ದಂಡ | 5721–00 | 8 | ಮುದ್ರಣ & ಲೇಖನ ಸಾಮಗ್ರಿ | 5229–00 |
| 7 | ಇತರೆ | 8236–00 | 9 | ಸಾದಿಲ್ವಾರ ವೆಚ್ಚ | 2–72 |
| | | | 10 | ವಿದ್ಯುತ್ ವೆಚ್ಚ | 23309–00 |
| | | | 11 | ಜೀಪ ಇಂಧನ ಮತ್ತು ದುರಸ್ತಿ | 7250–00 |
| | | | 12 | ಅಭಿವೃದ್ಧಿ ಕಾಮಗಾರಿ ವೆಚ್ಚ | 179827–00 |
| | **ಒಟ್ಟು ರೂ.** | **847195–00** | | **ಒಟ್ಟು ರೂ.** | **446962–72** |
| | **ಕೊರತೆ** | **–** | | **ಉಳಿತಾಯ** | **400232–28** |
| | **ಅಂತೂ** | **847195–00** | | **ಅಂತೂ** | **847195–00** |

ಸೂಚಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ,
ಅನುಮೋದಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ,

ವಿಷಯ ನಂ-3) ಸಹಾಯಕ ನಿರ್ದೇಶಕರ ಕಚೇರಿ, ಕೃಷಿ ಮಾರಾಟ ಇಲಾಖೆ, ಗದಗ ಕಚೇರಿಯ ಉಪಯೋಗಕ್ಕಾಗಿ ಹೊಸ ಯು.ಪಿ.ಎಸ್. ಬ್ಯಾಟರಿ ಅಳವಡಿಸಿದ ಬಗ್ಗೆ ಘಟನೋತ್ತರ ಬಜೆಟ್ ಮಂಜೂರಾತಿ ಪಡೆಯುವ ಕುರಿತು.

ಠರಾವ ನಂ-3) ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಗದಗ, ಇವರ ಪತ್ರ ದಿನಾಂಕ: 23-09-2019 ರ ಪತ್ರ ಸಂಖ್ಯೆ.ಸನಿಗ/ಕೃಮಾಇ/ಯು.ಪಿ.ಎಸ್./278/2019-20 ರ ಮೇರೆಗೆ ಸಹಾಯಕ ನಿರ್ದೇಶಕರ ಕಚೇರಿಯ ಉಪಯೋಗಕ್ಕಾಗಿ ಹೊಸ ಯು.ಪಿ.ಎಸ್. ಹಾಗೂ ಬ್ಯಾಟರಿಯನ್ನು ಅಧಿಕೃತ ಮಾರಾಟಗಾರರಿಂದ ತುರ್ತಾಗಿ ಖರೀದಿಸಿ ನೀಡಲು ಹಾಗೂ ನಂತರ ಸದರಿ ವೆಚ್ಚಕ್ಕೆ ಬಜೆಟ್ ಮಂಜೂರಾತಿಗಾಗಿ ನಿಯಮಾನುಸಾರ ಪ್ರಸ್ತಾವನೆಯನ್ನು ಸಲ್ಲಿಸಲು ಉಲ್ಲೇಖಿತ ಪತ್ರದಡಿ ತಿಳಿಸಿರುತ್ತಾರೆ. ಅದರನ್ವಯ ಈ ಸಮಿತಿಯ ದಿನಾಂಕ: 27-11-2019ರ ಪತ್ರ ಸಂಖ್ಯೆ.ಕೃಉಮಾಸ(ಲ)/774/2019-20ರ ಹೊಸ ಯು.ಪಿ.ಎಸ್. ಹಾಗೂ ಬ್ಯಾಟರಿ ಪೂರೈಸಿ ಅಳವಡಿಸಲು ಇಚ್ಛೆಯುಳ್ಳ ಅರ್ಹ ಪೂರೈಕೆ-ದಾರರಿಂದ ದರಪಟ್ಟಿಗಳನು ಅಹ್ವಾನಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ ಸಂ | ಪೂರೈಸಬೇಕಾದ ಸಾಮಗ್ರಿ | ಮಾದರಿ | ಪೂರೈಸಬೇಕಾದ ಸಂಖ್ಯೆ |
|---|---|---|---|
| 1 | ಬ್ಯಾಟರಿ | AMARAN/EXIDE (150 A.H) | 03 |
| 2 | ಯು.ಪಿ.ಎಸ್. | LUMINUS (2.5 K.V) | 01 |

ಈ ಕುರಿತು 03 ಜನ ಅರ್ಹ ಪೂರೈಕದಾರರು ದರಪಟ್ಟಿಗಳನ್ನು ಸಲ್ಲಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ಪೂರೈಕೆದಾರರ ಹೆಸರು | ನಮೂದಿಸಿದ ದರ | ಷರಾ |
|---|---|---|---|
| 1 | ಬರದೂರ ಬ್ಯಾಟರೀಸ್, ಗದಗ | 64,500-00 | 1 ನೇ ಕಡಿಮೆ ದರ |
| 2 | ಸ್ಟಾರ್ ಬ್ಯಾಟರೀಸ್, ಗದಗ | 69,400-00 | 3 ನೇ ಕಡಿಮೆ ದರ |
| 3 | ನ್ಯೂ ಲಕ್ಷ್ಮೀ ಬ್ಯಾಟರೀಸ್, ಗದಗ | 70,100-00 | 2 ನೇ ಕಡಿಮೆ ದರ |

ಮೇಲ್ಕಾಣಿಸಿದ ದರಪಟ್ಟಿಗಳನ್ನು ಪರಿಶೀಲಿಸಲಾಗಿ, ಬರದೂರ ಬ್ಯಾಟರೀಸ್, ಸಾ: ಗದಗ ಇವರು ಇನ್ನೂಳಿದ ಇಬ್ಬರು ಪೂರೈಕದಾರರು ಸೂಚಿಸಿರುವ ದರಕ್ಕಿಂತ ಕಡಿಮೆ ಮೊತ್ತ ರೂ. 64,500-00 (Including GST) ಕಡಿಮೆ ದರಪಟ್ಟಿ ಇರುವುದರಿಂದ ಸದರಿಯವರಿಗೆ ಹೊಸ ಯು.ಪಿ.ಎಸ್. ಹಾಗೂ ಬ್ಯಾಟರಿಯನ್ನು ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಗದಗ, ಇವರ ಕಚೇರಿಗೆ ಪೂರೈಸಿ ಅಳವಡಿಸಲು ಮತ್ತು ಈ ಸಂಬಂಧ ಬಿಲ್ಲನ್ನು ಸಮಿತಿಗೆ ಸಲ್ಲಿಸಲು ಸೂಚಿಸಿ ದಿ: 05-12-2019 ರ ಪೂರೈಕೆ ಆದೇಶ ಸಂಖ್ಯೆ. ಕೃಉಮಾಸ(ಲ)/796/2019-20 ರ ಪತ್ರದ ಮೇರೆಗೆ ಆದೇಶ ನೀಡಲಾಗಿರುತ್ತದೆ. ಎಂದು ಕಾರ್ಯದರ್ಶಿಯವರು ಸಭೆಯಲ್ಲಿ ವಿವರಿಸಿದರು.

ಮುಂದುವರೆದು ಸದರಿ ಆದೇಶದನ್ವಯ ಪೂರೈಕೆಯಾಗಿರುವ ಯು.ಪಿ.ಎಸ್. ಬ್ಯಾಟರಿಗಳನ್ನು ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಗದಗ, ಇವರ ಕಚೇರಿಗೆ ಅಳವಡಿಸಿದ್ದು ಮತ್ತು ಈ ಕುರಿತು ಮಾನ್ಯ ಸಹಾಯಕ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಗದಗ ಇವರ ದಿ: 12-12-2019 ರ ಪತ್ರ ಸಂಖ್ಯೆ.ಸನಿಗ/ ಕೃಮಾಇ/443/2019-20 ರ ಮೇರೆಗೆ ಹೊಸ ಯು.ಪಿ.ಎಸ್ ಹಾಗೂ ಬ್ಯಾಟರಿ ಅಳವಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದರನ್ವಯ ಬರದೂರ ಬ್ಯಾಟರೀಸ್, ಗದಗ ಇವರಿಗೆ ಈ ಸಮಿತಿಯಿಂದ ರೂ. 64,500-00 (ತೆರಿಗೆ ಸೇರಿ) ಗಳನ್ನು ಪಾವತಿಸಲಾಗಿರುತ್ತದೆ ಎಂದು ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು.

ಈ ಕುರಿತು ಕಾರ್ಯದರ್ಶಿಯವರು ಹೇಳಿರುವ ಮೇಲಿನ ವಿವರಣೆಗಳ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಗದಗ ಇವರ ಕಛೇರಿ ಜಿಲ್ಲಾ ಮಟ್ಟದ ಕಛೇರಿಯಾಗಿರುವುದರಿಂದ ಸದರಿ ಕಛೇರಿಗೆ ತುರ್ತಾಗಿ ಯು.ಪಿ.ಎಸ್. ಹಾಗೂ ಬ್ಯಾಟರಿ ಅವಶ್ಯಕವಾಗಿ ಬೇಕಾಗಿರುವುದಾಗಿ ಕೋರಿರುವುದನ್ನು ಮನಗಂಡು, ಸಮಿತಿಯ ಕಾರ್ಯದರ್ಶಿಯವರು ಮೇಲಿನಂತೆ ಕೈಗೊಂಡಿರುವ ಪ್ರಕ್ರೀಯೆಯನ್ನು ಅಂಗೀಕರಿಸಿ, ಬರದೂರ ಬ್ಯಾಟರೀಸ್, ಗದಗ ಇವರಿಗೆ ಈ ಸಮಿತಿಯಿಂದ ರೂ. 64,500-00 (ತೆರಿಗೆ ಸೇರಿ) ಗಳನ್ನು ಪಾವತಿಸಿರುವ ಮೊತ್ತಕ್ಕೆ ಸಕ್ಷಮ ಪ್ರಾಧಿಕಾರಿಗಳಿಂದ ಘಟನೋತ್ತರ ಮಂಜೂರಾತಿ ಪಡೆಯಬೇಕೆಂದು ತೀರ್ಮಾನಿಸಲಾಯಿತು.

ಸೂಚಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

ಅನುಮೋದಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ



ವಿಷಯ ನಂ-4) ಮೈಲಾರಪ್ಪ ಎಂ. ಅಗಡಿ, ಸಾ: ಲಕ್ಷ್ಮೇಶ್ವರ ಇವರು ಹೊಂದಿರುವ ಸಮಿತಿಯ ನಿವೇಶನ ಸಂಖ್ಯೆ-(ಸಿ.ಎಸ್. ನಂ-5279/32) ನೇದ್ದನ್ನು ಅವರು ನಿಧನ ಹೊಂದಿದ ಪ್ರಯುಕ್ತ ಅವರ ಮಗನಾದ ಶ್ರೀ ಗೀರಿಶ ಮೈಲಾರೆಪ್ಪ ಅಗಡಿ, ಇವರ ಹೆಸರಿಗೆ ಖಾತಾ ಬದಲಾವಣೆ ಮಾಡುವ ಕುರಿತು.

ಠರಾವ ನಂ-4) ಶ್ರೀ ಮೈಲಾರಪ್ಪ ಎಂ. ಅಗಡಿ ಸಾ: ಲಕ್ಷ್ಮೇಶ್ವರ ವರ್ತಕರು, ಇವರು ಮಾರುಕಟ್ಟೆ ಪ್ರಾಂಗಣದಲ್ಲಿ ವರ್ತಕರಾಗಿ ವ್ಯವಹಾರ ಮಾಡುತ್ತಾ ಬಂದಿದ್ದು, ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಸಂಖ್ಯೆ 32 (ಸಿ.ಟಿ.ಎಸ್. ನಂ-5289/32) ನೇದ್ದು, ಲೀಸ್-ಕಂ-ಸೇಲ್ ಆಧಾರದ ಮೇಲೆ ದಿ: 30-08-2012 ರಂದು ಹಂಚಿಕೆ ಮಾಡಲಾಗಿರುತ್ತದೆ. ಸದರಿ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಸದರಿ ಮಾಲೀಕರಾದ ಶ್ರೀ ಮೈಲಾರಪ್ಪ ಎಂ ಅಗಡಿ ಇವರು ದಿನಾಂಕ: 07-02-2019 ರಂದು ಮರಣ ಹೊಂದಿರುತ್ತಾರೆ. ಸದರಿಯವರ ವಾರಸದಾರರಾದ ಅವರ ಮಗನಾದ ಶ್ರೀ ಗೀರಿಶ ಮೈಲಾರಪ್ಪ ಅಗಡಿ ಸಾ: ಲಕ್ಷ್ಮೇಶ್ವರ ಮಾಲಕರು ಅಗಡಿ ಎಜೆನ್ಸೀಜ್, ಸಾ: ಲಕ್ಷ್ಮೇಶ್ವರ ಇವರ ಫರ್ಮಗೆ ಖಾತಾ ಬದಲಾವಣೆ ಮಾಡಿ ವರ್ಗಾವಣೆ ಮಾಡಿಕೊಡಬೇಕೆಂದು, ಮರಣ ಪ್ರಮಾಣ ಪತ್ರ, ವಾರಸಾ ಪ್ರಮಾಣ ಪತ್ರ, ವರ್ತಕರ ಲೈಸನ್ಸ್ ಪ್ರತಿ, ಲೀಸ್-ಕಂ-ಸೇಲ್ ಆಗಿರುವ ದಾಖಲಾತಿ ಮತ್ತು ಸದರಿಯವರ ತಾಯಿ ಮತ್ತು ಇಬ್ಬರು ಅಣ್ಣ-ತಮ್ಮಂದಿರು ಹಕ್ಕುಬಿಟ್ಟ ಪತ್ರ ಸಲ್ಲಿಸಿರುವ ಬಗ್ಗೆ ಕಾರ್ಯದರ್ಶಿಯವರು ಸಭೆಗೆ ಸೂಚಿಸಿದರು. ಸಭೆಯು ಸದರಿ ವಿಷಯವನ್ನು ಕುಲಂಕೂಷವಾಗಿ ಚರ್ಚಿಸಿ, ಸದರಿಯವರು ಸಲ್ಲಿಸಿರುವ ದಾಖಲಾತಿಗಳಂತೆ ಶ್ರೀ ಮೈಲಾರಪ್ಪ ಎಂ ಅಗಡಿ ಸಾ: ಲಕ್ಷ್ಮೇಶ್ವರ ಅವರಿಗೆ ಹಂಚಿಕೆಯಾದ ನಿವೇಶನವನ್ನು ಶ್ರೀ ಗೀರಿಶ ಮೈಲಾರಪ್ಪ ಅಗಡಿ ಮಾಲಕರು ಅಗಡಿ ಎಜೆನ್ಸಿಜ್ ಸಾ: ಲಕ್ಷ್ಮೇಶ್ವರ ಇವರ ಹೆಸರಿಗೆ ವರ್ಗಾವಣೆ ಮಾಡಿ ದಾಖಲಿಸಲು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದುಕೊಳ್ಳಲು ಪ್ರಸ್ತಾವನೆಯನ್ನು ಕಳುಹಿಸಲು ಸಭೆಯು ಸರ್ವಾನು-ಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ವಿಷಯ ನಂ-5) ಕೃ.ಉ.ಮಾ.ಸ. ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವ್ಹಿ.ವಾಯ್ ಯೋಜನೆಯಡಿ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ., ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-1, 2 ಮತ್ತು 3 ಕಾಮಗಾರಿಗೆ ಬಂದ ಟೆಂಡರ್‌ನ್ನು ಒಪ್ಪುವ ಕುರಿತು (ನಿಯಮ 71 ರಡಿ).

ಠರಾವ ನಂ-5) ದಿನಾಂಕ: 31-10-2019 ರ ಜರುಗಿದ ಸಮಿತಿ ಸಭೆಯ ಠರಾವ ಸಂಖ್ಯೆ-7(2) ರಲ್ಲಿ ತೀರ್ಮಾನಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗದಗ ಇವರು ತಯಾರಿಸಿಕೊಟ್ಟ ಅಂದಾಜು ಪತ್ರಿಕೆಯನ್ವಯ ನಿಯಮ 71 ರಡಿಯಲ್ಲಿ ಈ ಕೆಳಕಂಡ ಒಟ್ಟು 03 ಕಾಮಗಾರಿಯನ್ನು ಈ ಸಮಿತಿಯ ಟೆಂಡರ ಪ್ರಕಟಣೆ ಸಂಖ್ಯೆ/ಕೃಉಮಾಸ(ಲ)/775/776/777/2019-20, ದಿ: 27-11-2019 ರ ಮೂಲಕ 03 ಟೆಂಡರಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ ಪ್ರಕಟಣೆಯನ್ವಯ ಟೆಂಡರನಲ್ಲಿ ಈ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ.

1) **ಕಾಮಗಾರಿ ಹೆಸರು: ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್ ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-1 (ನಿಯಮ-71 ರಡಿಯಲ್ಲಿ)**

**<u>ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.</u>**

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿ-ಸಿರುವ 1000ಎಂ.ಟಿ. ಗೋದಾಮು ಮುಂದು-ಗಡೆ ಲೋಡಿಂಗ್ ಮತ್ತು ಅನ್ ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿ-ಸುವ ಕಾಮಗಾರಿ ಭಾಗ-1 | ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ, ಸಾ: ಬಾಲೆಹೊಸುರು | 2500 | 99732-47 | 1 ನೇ ಕಡಿಮೆ ದರ |
| | | ಶ್ರೀ ದೇವರಾಜ ತಿರಕಪ್ಪ ಕವಲೂರ ಸಾ: ಬಾಲೆಹೊಸುರ | 2500 | 106704-00 | 2 ನೇ ಕಡಿಮೆ ದರ |

| | | | | | |
|---|---|---|---|---|---|
| | (ನಿಯಮ-71 ರಡಿಯಲ್ಲಿ) | | | | |



ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು ಸದರಿಯವರ ದಾಖಲಾತಿಗಳ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಡಿಪಿ ಗದಗ ಇವರು ಮಾಡಿರುವ ಸಿಪ್ಪಾರಸ್ಸಿನ್ವಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-1 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿದ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು ಸೂಚಿಸಿದ ಮೊತ್ತ ರೂ. 99732-47 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

2) **ಕಾಮಗಾರಿ ಹೆಸರು: ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್ ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-2 (ನಿಯಮ-71 ರಡಿಯಲ್ಲಿ)**

**<u>ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.</u>**

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿ-ಸಿರುವ 1000ಎಂ.ಟಿ. ಗೋದಾಮು ಮುಂದು-ಗಡೆ ಲೋಡಿಂಗ್ ಮತ್ತು ಅನ್ ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿ-ಸುವ ಕಾಮಗಾರಿ ಭಾಗ-2 (ನಿಯಮ-71 ರಡಿಯಲ್ಲಿ) | ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ, ಸಾ: ಬಾಲೆಹೊಸುರು | 2500 | 99660-17 | 1 ನೇ ಕಡಿಮೆ ದರ |
| | | ಶ್ರೀ ದೇವರಾಜ ತಿರಕಪ್ಪ ಕವಲೂರ ಸಾ: ಬಾಲೆಹೊಸುರ | 2500 | 99900-00 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು ಸದರಿಯವರ ದಾಖಲಾತಿಗಳ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಡಿಪಿ ಗದಗ ಇವರು ಮಾಡಿರುವ ಸಿಪ್ಪಾರಸ್ಸಿನ್ವಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-2 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿದ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು ಸೂಚಿಸಿದ ಮೊತ್ತ ರೂ. 99660-17 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

3) **ಕಾಮಗಾರಿ ಹೆಸರು: ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್ ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-3 (ನಿಯಮ-71 ರಡಿಯಲ್ಲಿ)**

## ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿ-ಸಿರುವ 1000ಎಂ.ಟಿ. ಗೋದಾಮು ಮುಂದು-ಗಡೆ ಲೋಡಿಂಗ್ ಮತ್ತು ಅನ್ ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿ-ಸುವ ಕಾಮಗಾರಿ ಭಾಗ-3 (ನಿಯಮ-71 ರಡಿಯಲ್ಲಿ) | ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ, ಸಾ: ಬಾಲೆಹೊಸುರು | 2500 | 99975-42 | 1 ನೇ ಕಡಿಮೆ ದರ |
| | | ಶ್ರೀ ದೇವರಾಜ ತಿರಕಪ್ಪ ಕವಲೂರ ಸಾ: ಬಾಲೆಹೊಸುರ | 2500 | 101646.00 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು ಸದರಿಯವರ ದಾಖಲಾತಿಗಳ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಡಿಪಿ ಗದಗ ಇವರು ಮಾಡಿರುವ ಸಿಪ್ಪಾರಸ್ಸಿನ್ವಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆರ್.ಕೆ.ವಿ.ವಾಯ್. ಯೋಜನೆಯಡಿ ನಿರ್ಮಿಸಿರುವ 1000 ಎಂ.ಟಿ. ಗೋದಾಮು ಮುಂದುಗಡೆ ಲೋಡಿಂಗ್ ಮತ್ತು ಅನ್‌ಲೋಡಿಂಗ ಮಾಡಲು ಗಟಾರು ಮೇಲುಗಡೆ ಆರ್.ಸಿ.ಸಿ. ಸಿ.ಡಿ. ನಿರ್ಮಿಸುವ ಕಾಮಗಾರಿ ಭಾಗ-3 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿದ ಶ್ರೀ ಫಕ್ಕೀರೇಶ ತಿರಕಪ್ಪ ಕವಲೂರ ಗುತ್ತಿಗೆದಾರರು, ಸಾ: ಬಾಲೆಹೊಸುರ, ಇವರು ಸೂಚಿಸಿದ ಮೊತ್ತ ರೂ. 99975-00 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ರಾಜಶೇಕರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ

ವಿಷಯ ನಂ-6) ಮುಖ್ಯ/ಉಪ ಮಾರುಕಟ್ಟೆ ಪ್ರಾಂಗಣಗಳ ನಿವೇಶನಗಳ ಹಂಚಿಕೆ ಕುರಿತು ಟೆಂಡರ್ ಕರೆಯುವ ಬಗ್ಗೆ.

ಠರಾವ ನಂ-6) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿಯ 09 ನಿವೇಶನಗಳು ಮತ್ತು ಉಪ ಮಾರುಕಟ್ಟೆ ಪ್ರಾಂಗಣಗಳಾದ ಶಿರಹಟ್ಟಿ, ಬೆಳ್ಳಟ್ಟಿ ಹಾಗೂ ಶಿಗ್ಲಿಯಲ್ಲಿರುವ ನಿವೇಶನಗಳನ್ನು ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆಗೆ ಲಭ್ಯವಿದ್ದು, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿಯ ನಿವೇಶನಗಳಿಗೆ ಪೇಟೆ ಕಾರ್ಯಕರ್ತರಿಂದ ಬೇಡಿಕೆಯಿದ್ದು, ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಲೀಸ್-ಕಂ-ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಆಸ್ತಿ ಹಂಚಿಕೆ ನಿಯಮಗಳು 2004 ರನ್ವಯ ನಿಯಮ-9ಬಿ ಅಡಿ ಮಂಜೂರಾತಿಗಾಗಿ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಹಾಗೂ ಸದರಿ ಪ್ರಸ್ತಾವನೆಗೆ ಮಂಜೂರಾತಿಗಾಗಿ ಸರ್ಕಾರದ ಪ್ರದಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ ಬೆಂಗಳೂರ ಇವರಿಗೆ ಮಾನ್ಯ ನಿರ್ದೇಶಕರು ಸಲ್ಲಿಸಿರುವುದನ್ನು ಸಭೆಗೆ ಸೂಚಿಸಲಾಯಿತು.

ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಲಾಯಿತು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ ಬೆಂಗಳೂರ ಇವರಿಂದ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ನಿಯಮ 9ಬಿ ಅಡಿ ಅನುಮತಿ ಬಂದ ನಂತರ ಹಂಚಿಕೆ ಕ್ರಮ ಜರುಗಿಸಲು ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ
ಅನುಮೋದಕರು: ಶ್ರೀ ನೀಲಪ್ಪ ಈರಪ್ಪ ಹತ್ತಿ

ವಿಷಯ ನಂ–7) ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 10 ದಿನಸಿ ಮಳಿಗೆಗಳನ್ನು (09 ದಿನಸಿ ಮಳಿಗೆಗಳು) ನಿರ್ಮಿಸುವ ಕುರಿತು ಟೆಂಡರ್ ಕರೆಯುವ ಬಗ್ಗೆ.

ಠರಾವ ನಂ–7) ಸನ್ 2017–18 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆಯಲ್ಲಿ ಮಂಜೂರ ಆಗಿರುವ ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 10 ದಿನಸಿ ಮಳಿಗೆಗಳಿಗೆ (09 ದಿನಸಿ ಮಳಿಗೆಗಳು) ನಿರ್ಮಿಸುವ ಕುರಿತು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಬೆಳಗಾವಿ ಇವರು ತಮ್ಮ ಪತ್ರ ದಿನಾಂಕ: 13–09–2019 ರಲ್ಲಿ ಕಾಮಗಾರಿಯ ರೂ. 30–00 ಲಕ್ಷಗಳ ಮೊತ್ತದ ಅಂದಾಜು ಪತ್ರಿಕೆಗೆ, ತಾಂತ್ರಿಕ ಮಂಜೂರಾತಿ ಮತ್ತು ಟೆಂಡರ್ ಕಾಮಗಾರಿಯ ಕರಡು ಟೆಂಡರ್ ಪತ್ರಿಕೆ KW-2 ರೂ. 29,98545–03 ಗಳ ಕರಡು ಟೆಂಡರ್ ಪತ್ರಿಕೆಗೆ ಅನುಮೋದನೆ ನೀಡಿರುವುದನ್ನು ಸಭೆಗೆ ಕಾರ್ಯದರ್ಶಿಯವರು ವಿವರಿಸಿದರು.

ಸಭೆಯಲ್ಲಿ ಈ ಕುರಿತು ಕುಲಂಕೂಷವಾಗಿ ಪರಿಶೀಲಿಸಲಾಯಿತು. ಪ್ರಸ್ತುತ ಸಮಿತಿಯ ಆರ್ಥಿಕ ಪರಿಸ್ಥಿತಿಯು ಸುಧಾರಿಸಿವುದರಿಂದ ಹಾಗೂ ಶಿರಹಟ್ಟಿಯಲ್ಲಿ ದಿನಸಿ ಮಳಿಗೆಗಳನ್ನು ನಿರ್ಮಿಸಿರುವುದರಿಂದ ಆದಾಯವಾಗುವುದನ್ನು ಅನುಲಕ್ಷಿಸಿ, ಶಿರಹಟ್ಟಿ ಉಪ ಮಾರಕಟ್ಟೆಯಲ್ಲಿ 10 ದಿನಸಿ ಮಳಿಗೆಗಳನ್ನು (09 ದಿನಸಿ ಮಳಿಗೆಗಳು) ನಿರ್ಮಿಸುವ ಕುರಿತು ನಿಯಮಾನುಸಾರ ಟೆಂಡರ್‌ನ್ನು ಅವ್ಹಾನಿಸಬೇಕೆಂದು ಸೂಚಿಸಿ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ
ಅನುಮೋದಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ,

ವಿಷಯ ನಂ–8) ಸರ್ಕಾರಿ ಅಧಿಸೂಚನೆ ಸಿಆಸುಇ/02/ಹೆಚ್‌ಹೆಚ್‌ಎಲ್/2019, ದಿನಾಂಕ: 13–06–2019 ರನ್ವಯ ನಾಲ್ಕನೇ ಶನಿವಾರ ರಜೆ ಘೋಷಿಸುವ ಕುರಿತು.

ಠರಾವ ನಂ–8) ಸದರಿ ವಿಷಯವನ್ನು ಸಧ್ಯಕ್ಕೆ ಮುಂದೂಡಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ಓಂ ಪ್ರಕಾಶ ಮುಕರಾಜ ಜೈನ್

ವಿಷಯ ನಂ–9) ಸಮಿತಿಯ ಪೂರ್ಣಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಸಮಾರಂಭ ಏರ್ಪಡಿಸುವ ಕುರಿತು.

ಠರಾವ ನಂ–9) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಪೂರ್ಣಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಾದ ಮುಖ್ಯ ಕಾರ್ಯಾಲಯ ಕಟ್ಟಡದ ಮೇಲಅಂತಸ್ಥಿನಲ್ಲಿ ನಿರ್ಮಿಸಿರುವ ಸಭಾ ಭವನ, ಅಧ್ಯಕ್ಷರ, ಉಪಾಧ್ಯಕ್ಷರ ಕೊಠಡಿಗಳು, ಕ್ಯಾಂಟಿನ್ ಕಟ್ಟಡ, ನೂತನ ಶೌಚಾಲಯ, ಹಾಗೂ ಕುರಿ ಮತ್ತು ಮೇಕೆಗಳ ಮಾರುಕಟ್ಟೆ ಇವುಗಳ ಕಾಮಗಾರಿಗಳು ಪೂರ್ಣಗೊಂಡಿದ್ದು ಅವುಗಳ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ನಿಯಮಾನುಸಾರ ಸಮಾರಂಭಕ್ಕೆ ಅತಿಥಿಗಳನ್ನು ಆಹ್ವಾನಿಸಿ ಉದ್ಘಾಟನಾ ಸಮಾರಂಭವನ್ನು ಫೆಬ್ರವರಿ ತಿಂಗಳದಲ್ಲಿ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸೂಚಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ
ಅನುಮೋದಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ

ವಿಷಯ ನಂ–10) ಸಿ.ಸಿ.ಆಯ್ ಹತ್ತಿ ಖರೀದಿಯ ತೂಕದ ಫೀ ಸಂದಾಯ ಮಾಡುವ ಕುರಿತು ಸಮಿತಿಯಿಂದ ಲೈಸನ್ಸ್ ಪಡೆದ ತೂಕದವರು ನೀಡಿದ ಮನವಿ ಕುರಿತು ಚರ್ಚೆ.

ಠರಾವ ನಂ–10) ಸಮಿತಿಯಿಂದ ತೂಕದ ಲೈಸನ್ಸ ಪಡೆದು ಕೆಲಸ ನಿರ್ವಹಿಸುತ್ತಿರುವ ತೂಕದವರು ಪ್ರಸ್ತುತ ಸಿ.ಸಿ.ಐ.ದವರು ರೈತರಿಂದ ಹತ್ತಿಯನ್ನು ಎಂ.ಎಸ್.ಪಿ. ಯೋಜನೆಯಡಿಯಲ್ಲಿ ನೇರವಾಗಿ ಖರೀದಿಸುತ್ತಿದ್ದು, ಖರೀದಿ ಕೇಂದ್ರದಲ್ಲಿ ಸಮಿತಿಯ ತೂಕದವರು ಸಹ ತೂಕದ ಕೆಲಸವನ್ನು ನಿರ್ವಹಿಸುತ್ತಿದ್ದು ಸಿ.ಸಿ.ಐದವರಿಂದ ತೂಕದ ಫೀಯನ್ನು ಸಮಿತಿಗೆ ಬರುವಂತೆ ಮಾಡಬೇಕೆಂದು ವಿನಂತಿಸಿ ಸಲ್ಲಿಸಿರುವ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು.

ಭಾರತೀಯ ಹತ್ತಿ ನಿಗಮ, ಇವರಿಂದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಹತ್ತಿನ್ನು ಖರೀದಿಸಲಾಗುತ್ತಿದ್ದು, ಸಮಿತಿವತಿಯಿಂದ ಒಬ್ಬ ಸಿಬ್ಬಂದಿಯೊಂದಿಗೆ 2 ಜನ ತೂಕದವರನ್ನು ನಿಯೋಜಿಸಲಾಗಿದೆ. ಸದರಿ ತೂಕದವರಿಗೆ ತೂಕದ ಶುಲ್ಕ ನಿಗದಿಪಡಿಸಿದ ಬೈಲಾವನ್ನು / ಆದೇಶವನ್ನು ಸಿ.ಸಿ.ಐ ಅವರು ಕೋರಿರುತ್ತಾರೆ. ಬೈಲಾದಲ್ಲಿ ಹತ್ತಿ ಮಾರಾಟದ ಮೊದಲು ಮಾರಾಟಗಾರರಿಂದ ಪ್ರತಿ ಅಂಗಡಿಗೆಗೆ ರೂ.1.50 ಎಂದು ಮಾತ್ರ ನಮೂದಿಸಲಾಗಿದೆ. ಆದರೆ ಮಾರಾಟದ ನಂತರ ಖರೀದಿದಾರರಿಂದ ತೂಕದವರು ಪಡೆಯುವ ದರವನ್ನು ನಮೂದಿಸಿರುವುದಿಲ್ಲ.

ಭಾರತೀಯ ಹತ್ತಿ ನಿಗಮ ಇವರು ರೈತರಿಂದ ಹತ್ತಿಯನ್ನು ನೇರವಾಗಿ ಖರೀದಿಸಲಾಗುತ್ತಿದ್ದು, ಖರೀದಿಯ ನಂತರ ತೂಕವನ್ನು ಮಾಡಲಾಗುತ್ತಿದೆ. ತೂಕದವರಿಗೆ ಈ ಪದ್ಧತಿಯಲ್ಲಿ ತೂಕದ ಶುಲ್ಕ ದೊರಕುತ್ತಿಲ್ಲ ವೆಂಬ ವಿಷಯವನ್ನು ಮತ್ತು ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದನ್ನು ಸಭೆಗೆ ವಿವರಿಸಲಾಯಿತು.

ಸಭೆಯಲ್ಲಿ ಈ ಕುರಿತು ಸುದೀರ್ಘವಾಗಿ ಚರ್ಚಿಸಿ, ಬೈಲಾದಲ್ಲಿ ಮಾರಾಟದ ನಂತರ ಖರೀದಿದಾರರಿಂದ ಪಡೆಯುವ ಶುಲ್ಕ 0 ಎಂದು ಇರುವುದನ್ನು **ಭಾರತೀಯ ಹತ್ತಿ ನಿಗಮದಿಂದ ಹತ್ತಿ ಖರೀದಿಸುವ ಸಂದರ್ಭದಲ್ಲಿ** ಪ್ರತಿ ಕ್ವಿಂಟಲ್‌ಗೆ ರೂ. 1.50 ಗಳನ್ನು ತೂಕದ ಶುಲ್ಕವಾಗಿ ಪಡೆಯಲು ಹಾಗೂ ಪ್ರತಿ ಅಂಡಿಗೆಗೆ ಬದಲಾಗಿ ಪ್ರತಿ ಕ್ವಿಂಟಲ್‌ಗೆ ಎಂದು ಸೂಕ್ತ ತಿದ್ದುಪಡಿ ಮಾಡಿ ಮಾನ್ಯ ನಿರ್ದೇಶಕರಿಂದ ಮಂಜೂರಾತಿ ಪಡೆಯಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ
ಅನುಮೋದಕರು: ಶ್ರೀ ಪುಲಕೇಶಿ ಗೂಳಪ್ಪ ಉಪನಾಳ

ವಿಷಯ ನಂ-11) 2019-20 ನೇ ಸಾಲಿನಿಂದ ಮುಂದಿನ ಅವಧಿಗೆ ಲೈಸನ್ಸ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ, ಮಂಜೂರಾತಿ ಮಾಡುವ ಕುರಿತು.

ಠರಾವ ನಂ-11) ಈ ಕೆಳಕಾಣಿಸಿದ ಅರ್ಜಿದಾರರು ಸಮಿತಿಯಿಂದ ಲೈಸನ್ಸ ಕೋರಿ ಅವಶ್ಯಕ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ್ದು ಅವರುಗಳ ವಿವರವನ್ನು ಸಭೆಗೆ ಓದಿ ಹೇಳಲಾಯಿತು.

**ಸನ್ 2019-20 ನೇ ಸಾಲಿನಿಂದ 10 ವರ್ಷದ ಅವಧಿಗೆ ಲೈಸನ್ಸ ಹೊಂದಿದ ಖರೀದಿದಾರರ ವಿವರ**

| ಕ್ರ. ಸಂ | ವರ್ತಕರ ಹೆಸರು ಮತ್ತು ವಿವರ | ರಪ್ತುದಾರರು | ಆಮದುದಾರರು | ದಾಸ್ತಾನುಗಾರರು | ಜಿನ್ನರ | ಪ್ರೆಸ್ಸರ |
|---|---|---|---|---|---|---|
| 1 | ಶ್ರೀ ಬಿ.ಸಿ.ಎನ್ ಕಾಟನ್ ಇಂಡಸ್ಟ್ರೀಜ್, ಸಾ: ಲಕ್ಷ್ಮೇಶ್ವರ<br>ಪ್ರೋ: ಚನ್ನಪ್ಪ ಬಸವರಾಜ ನೆಲವಿಗಿ, | -- | -- | -- | 01 | 01 |
| 2 | ಶ್ರೀ ನಿರ್ಮಲೇಶ್ವರ ಟ್ರೇಡಿಂಗ್ ಫರ್ಮ, ಸಾ: ಲಕ್ಷ್ಮೇಶ್ವರ<br>ಪ್ರೊ: ಚನ್ನಬಸಪ್ಪ ಮಲ್ಲೇಶಪ್ಪ ಮಹಾಂತಶೆಟ್ಟರ | 01 | 01 | 01 | -- | -- |
| 3 | ಶ್ರೀ ಹುಲಿಗೆಮ್ಮದೇವಿ ಟ್ರೇಡರ್ಸ, ಸಾ: ಲಕ್ಷ್ಮೇಶ್ವರ<br>ಪ್ರೋ: ಹೇಮಣ್ಣ ಸಿ. ಪಂಚಗಟ್ಟಿ | 01 | 01 | 01 | -- | -- |
| 4 | ಕಾರಡಗಿ ಟ್ರೇಡರ್ಸ, ಸಾ: ಲಕ್ಷ್ಮೇಶ್ವರ<br>ಪ್ರೊ: ಮಹಮ್ಮದಹನಿಪ ಎಂ.ಕಾರಡಗಿ, | 01 | 01 | 01 | -- | -- |
| 5 | ಶ್ರೀ ಮಾತಾ ಅನ್ನಪೂರ್ಣೇಶ್ವರಿ ಎಂಟರಪ್ರೈಸಸ್,<br>ಸಾ: ಲಕ್ಷ್ಮೇಶ್ವರ<br>ವಿರುಪಾಕ್ಷಪ್ಪ ಬಸವಣ್ಣೆಪ್ಪ ಗುಡ್ಡಣ್ಣವರ, | 01 | 01 | 01 | -- | -- |
| 6 | ಶಾಂತಾ ಅಗ್ರೋ ಇಂಡಸ್ಟ್ರೀಜ್, ಸಾ: ಲಕ್ಷ್ಮೇಶ್ವರ<br>ಪ್ರೊ: ಸುನಿತಾ ಮಲ್ಲಿಕಾರ್ಜುನ ಕೊಟಗಿ, | 01 | 01 | 01 | -- | -- |
| 7 | ಶ್ರೀ ಮಹೇಶ ಟ್ರೇಡರ್ಸ, ಸಾ: ಲಕ್ಷ್ಮೇಶ್ವರ<br>ಪ್ರೊ: ಮಹೇಶರೆಡ್ಡಿ ಈಶ್ವರ ಹಾದಿಮನಿ, | 01 | 01 | 01 | -- | -- |
| | **ಒಟ್ಟು** | **06** | **06** | **06** | **01** | **01** |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೇಲ್ಕಾಣಿಸಿದಂತೆ ಖರೀದಿ ಲೈಸನ್ಸ್ 10 ವರ್ಷದ ಅವಧಿಗೆ ಲೈಸನ್ಸ ಮಂಜೂರು ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಓಂ ಪ್ರಕಾಶ ಪುಕರಾಜ್ ಜೈನ್
ಅನುಮೋದಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

ವಿಷಯ ನಂ–12) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

ವಿಷಯ ನಂ–12(1) 2020 ನೇ ಸಾಲಿಗೆ ಸಮಿತಿಗೆ ಹಾಗೂ ಮಾರುಕಟ್ಟೆ ಪ್ರಾಂಗಣಕ್ಕೆ ರಜಾ ದಿನಗಳನ್ನು ಘೋಷಿಸುವ ಕುರಿತು.

ಠರಾವ ನಂ–12(1) 2020 ನೇ ಸಾಲಿಗೆ ಸಮಿತಿಯ ಕಚೇರಿಯ ಹಾಗೂ ಮಾರುಕಟ್ಟೆಗೆ ಸಾರ್ವತ್ರಿಕ ರಜೆ ಘೋಷಿಸುವ ಕುರಿತು ಸಮಿತಿಯಲ್ಲಿ ಚರ್ಚಿಸಲಾಯಿತು. 2020 ನೇ ಸಾಲಿಗಾಗಿ ಸರ್ಕಾರದಿಂದ ನಿಗಧಿಪಡಿಸಿದ ರಜಾ ದಿನಗಳನ್ನು ಹಾಗೂ ಸ್ಥಾನಿಕ ರಜಾ ದಿನಗಳನ್ನು ಹಾಗೂ ಪ್ರತಿ ತಿಂಗಳು 2 ನೇ ಶನಿವಾರದ ಬದಲಾಗಿ ಪ್ರತಿ ಅಮವಾಸೆಯ ದಿನದಂದು ಕಚೇರಿಗೂ ಹಾಗೂ ವ್ಯಾಪಾರ ವಹಿವಾಟಿಗೂ ಈ ಕೆಳಗಿನಂತೆ ರಜೆ ಘೋಷಿಸಲು ಮಂಜೂರಾತಿ ನೀಡಲಾಯಿತು.

| ಕ್ರ.ಸಂ. | ದಿನಾಂಕ | ವಾರ | ಸಾರ್ವತ್ರಿಕ ರಜಾ |
|---|---|---|---|
| 1. | 15–01–2020 | ಬುದವಾರ | ಉತ್ತರಾಯಣ ಪುಣ್ಯ ಕಾಲ ಸಂಕ್ರಾಂತಿ ಹಬ್ಬ |
| 2. | 21–02–2020 | ಶುಕ್ರವಾರ | ಮಹಾ ಶಿವರಾತ್ರಿ |
| 3. | 25–03–2020 | ಬುದವಾರ | ಯುಗಾದಿ ಹಬ್ಬ |
| 4. | 06–04–2020 | ಶನಿವಾರ | ಮಹಾವೀರ ಜಯಂತಿ |
| 5. | 10–04–2020 | ಶುಕ್ರವಾರ | ಗುಡ್ ಫ್ರೈಡೆ, |
| 6. | 14–04–2020 | ಮಂಗಳವಾರ | ಡಾ: ಬಿ.ಆರ್.ಅಂಬೇಡ್ಕರ ಜಯಂತಿ |
| 7. | 01–05–2020 | ಬುಧವಾರ | ಕಾರ್ಮಿಕ ದಿನಾಚರಣೆ |
| 8. | 25–05–2020 | ಸೋಮವಾರ | ಖುತುಬ್–ಎ–ರಂಜಾನ್ |
| 9. | 01–08–2020 | ಶನಿವಾರ | ಬಕ್ರೀದ್ |
| 10. | 15–08–2020 | ಶನಿವಾರ | ಸ್ವಾತಂತ್ರ್ಯ ದಿನಾಚರಣೆ |
| 11. | 17–09–2020 | ಗುರುವಾರ | ಮಹಾಲಯ ಅಮವಾಸ್ಯೆ |
| 12. | 02–10–2020 | ಶುಕ್ರವಾರ | ಗಾಂಧಿ ಜಯಂತಿ |
| 13. | 26–10–2020 | ಸೋಮವಾರ | ವಿಜಯ ದಶಮಿ |
| 14. | 30–10–2020 | ಶುಕ್ರವಾರ | ಈದ–ಮಿಲಾದ್ |
| 15. | 31–10–2020 | ಶನಿವಾರ | ಮಹರ್ಷಿ ವಾಲ್ಮಿಕಿ ಜಯಂತಿ |
| 16. | 16–11–2020 | ಸೋಮವಾರ | ಬಲಿಪಾಡ್ಯಮಿ, ದೀಪಾವಳಿ |
| 17. | 03–12–2020 | ಗುರುವಾರ | ಕನಕದಾಸ ಜಯಂತಿ |
| 18. | 25–12–2020 | ಶುಕ್ರವಾರ | ಕ್ರಿಸ್‌ಮಸ್ |

**ಸ್ಥಾನಿಕ ರಜಾ ದಿನಗಳು**

| | | | |
|---|---|---|---|
| 1 | ಮುಕ್ತಿ ಮಂದಿರ ಮಹಾಸ್ವಾಮಿಗಳ ರಥೋತ್ಸವ | 7 | ಭಾರತ ಹುಣ್ಣಿಮೆ |
| 2 | ಸೋಮೇಶ್ವರ ಜಾತ್ತೆ | 8 | ದೂದ ಫೀರಾ ಉರುಸು |
| 3 | ಶಿರಹಟ್ಟಿ ಫಕ್ಕೀರೇಶ್ವರ ಜಾತ್ರೆ | 9 | ಮುಕ್ತಿಮಂದಿರ ರಂಭಾಪೂರಿ ಜಗದ್ಗುರುಗಳ ಪುಣ್ಯ ತಿಥಿ |
| 4 | ಕೋಡಿಯಲ್ಲಮ್ಮ ಜಾತ್ರೆ | 10 | ನಾಗರ ಪಂಚಮಿ |
| 5 | ಹೊಳಲಮ್ಮದೇವಿ ಜಾತ್ರೆ | 11 | ಕಡೆಯ ಶ್ರಾವಣ ಸೋಮವಾರ |
| 6 | ರಂಗ ಪಂಚಮಿ | 12 | ಕಾರ ಹುಣ್ಣಿಮೆ |

ಸೂಚಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ

ಅನುಮೋದಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ

ಈ ರೀತಿ ಕಾರ್ಯಕಲಾಪಗಳು ಜರುಗಿ ಸಭೆಯು ಮುಕ್ತಾಯವಾಯಿತು.

ಸಹಿ/–
ಕಾರ್ಯದರ್ಶಿ
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

ಸಹಿ/–
ಅಧ್ಯಕ್ಷರು
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

'ನಕಲು ಪ್ರತಿ'

ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ